# ಸಮಸುಖ ದುಃಖಿಗಳು

ಯುದ್ಧ ಮತ್ತು ಹಿಂಸೆಯನ್ನು ಅಪ್ಪಿಕೊಂಡವರಿಗೆ ತತ್ಕಾಲಕ್ಕೆ ಒಂದಿಷ್ಟು ಅನುಕೂಲತೆಗಳು ಒದಗಬಹುದು! ಆದರೆ ಅದರ ಅಂತ್ಯ ಮಾತ್ರ ಕಷ್ಟಕರವೂ ಮತ್ತು ಸಹಿಸಲಸಾಧ್ಯವಿಲ್ಲದಂಥ ಸ್ಥಿತಿಯನ್ನು ತಂದೊಡ್ಡುತ್ತದೆ ಎಂಬುದನ್ನು ಜಗತ್ತಿನ ರಾಜಕೀಯ ಇತಿಹಾಸವೇ ಹೇಳುತ್ತದೆ. ಬುದ್ಧದೇವ, ಬಸವಣ್ಣ, ಗಾಂಧೀಜಿ, ಕನಕ, ಕುವೆಂಪು ಮುಂತಾದ ದಾರ್ಶನಿಕರು ಅಹಿಂಸೆ ಮತ್ತು ಲೋಕಕಾರುಣ್ಯವನ್ನು ಪಾಲಿಸುವುದೇ ನಿಜವಾದ ಧರ್ಮವೆಂದು ತಿಳಿದಿದ್ದರು.

ಸಮಾಜದಲ್ಲಿ ದ್ವೇಷ, ಹಗೆತನದ ಕಾಲಗಳು ದೀರ್ಘವಾಗತೊಡಗಿದಾಗ, ಮೃಗೀಯ ಭಾವನೆಗಳ ಮೇಲಾಟ ಹೆಚ್ಚಾಗುತ್ತದೆ. ಇದರ ಪರಿಣಾಮವಾಗಿ ದುಃಖಿತರ ಮತ್ತು ಬಡವರ ಬದುಕು ಹಿಂಸೆಯ ಜ್ವಾಲೆಯಲ್ಲಿ ಬಾಡಿಹೋಗುತ್ತದೆ. ಭಿನ್ನಾಭಿಪ್ರಾಯಗಳು ಹಿಂಸೆಯ ಮೂಲಕ ಅಂತ್ಯ ಕಾಣುವುದು ಮೃಗೀಯ ವ್ಯವಸ್ಥೆಯಲ್ಲಿ ಮಾತ್ರ! ಇದು ನಮ್ಮೆಲ್ಲರ ಮನುಷ್ಯತ್ವದ ಸಂಬಂಧಗಳನ್ನು ಕತ್ತರಿಸಿ ಹಾಕುತ್ತದೆ. ದಯೆ, ಸಹಿಷ್ಣುತೆ ಮತ್ತು ಜೀವಕಾರುಣ್ಯದಿಂದ ದೂರ ಸರಿದ ಪ್ರಭುತ್ವ ಕಿರಾತಕರ ಕೈಯೊಳಗಿನ ಆಯುಧವಾಗುತ್ತದೆ. ಆಗ ಸಮಾಜದಲ್ಲಿ ಮನುಷ್ಯರ ರಕ್ತವೂ ಎಲ್ಲ ಸರಕುಗಳಂತೆ ಅಗ್ಗವಾಗಿ ಬಿಕರಿಯಾಗುತ್ತದೆ. ಕರುಣೆಯ ಬೇರು ಕಳೆದುಕೊಂಡ ಅಧಿಕಾರದ ವೃಕ್ಷ ಫಲ ನೀಡುವುದಿಲ್ಲ!

ಇದನ್ನೆಲ್ಲಾ ಕಂಡ ಕನ್ನಡದ ಜಾಗೃತ ಪ್ರಜ್ಞೆ ಹನ್ನೆರಡನೇ ಶತಮಾನದಲ್ಲೇ 'ದಯವೇ ಧರ್ಮದ ಮೂಲವಯ್ಯಾ' ಎಂಬ ಲೋಕೋತ್ತರವಾದ ಸರಳ ಸತ್ಯವನ್ನು ಜಗತ್ತಿಗೆ ನೀಡಿತು. 'ದಯೆ' ಕೇವಲ ಧರ್ಮಕ್ಕಷ್ಟೇ ಅಲ್ಲ! ರಾಜಧರ್ಮಕ್ಕೂ 'ದಯೆ' ಮತ್ತು 'ಸಹಷ್ಣುತೆ'ಯೇ ಅಸ್ತಿವಾರವಾಗಬೇಕು ಎನ್ನುವುದನ್ನು ಕನ್ನಡದ ದಾರ್ಶನಿಕ ನುಡಿಲೋಕ ಜಗತ್ತಿಗೆ ನೀಡಿದೆ. ಲೋಕಕಾರುಣ್ಯ ಎನ್ನುವುದು ಮನುಷ್ಯರ ಹೃದಯದಲ್ಲಿ ಯಾವ ವಿಭಜನೆಯನ್ನೂ ಮಾಡದೆ, ವ್ಯಕ್ತಿ ಮತ್ತು ಲೋಕಹಿತವನ್ನು ಪ್ರೋತ್ಸಾಹಿಸುತ್ತದೆ. ಇದೆಲ್ಲದರ ಅರಿವಿಲ್ಲದವರ ನುಡಿಗಳ ತುದಿನಂಜು ಸಮಾಜವನ್ನು ವಿಭಜಿಸುತ್ತದೆ. ಸ್ವಾತಂತ್ರ್ಯ ಮತ್ತು ಪ್ರೀತಿಯಿಂದ ಹರಿವ ಜನಸಾಮಾನ್ಯರ ಸಾಮರಸ್ಯದ ನದಿಗೆ ಆಳರಸರೇ ತಡಕು ಎಂಬುದನ್ನು ವರ್ತಮಾನದ ಸಂಗತಿಗಳೇ ನಮಗೆ ಪಾಠ ಹೇಳುತ್ತಿವೆ.

ಯುದ್ಧ ಮತ್ತು ಹಿಂಸೆಗೆ ಬಲಿಯಾದ ಎಲ್ಲರ ರಕ್ತ ಕೊಂದವರನ್ನು ಹುಡುಕುತ್ತಾ ಹೋಗುವುದಿಲ್ಲ! ಆದರೆ ಅದು ಹರಿದು ಬರುವುದು ತನ್ನ ಹೆತ್ತವರ ಮನೆಬಾಗಿಲಿಗೆ. ಹೀಗೆ ಹರಿದು ಬಂದ ರಕ್ತಕ್ಕೆ ನೂರುಪಟ್ಟು ಕಣ್ಣೀರು ಆ ಮನೆಯಿಂದ ಹರಿಯುತ್ತದೆ. ಮಹಾಭಾರತದ ಕತೆ ನಮಗೆ ಹೇಳುವುದು ಇದನ್ನೇ. ಮಹಾಭಾರತದಲ್ಲಿ ಹರಿದಷ್ಟು ರಕ್ತ ಮತ್ತು ಹೆಣ್ಣಿನ ಕಣ್ಣೀರು ಯಾವ ನದಿಯಲ್ಲೂ ಹರಿದಿರಲಾರದು!

ಕುಮಾರವ್ಯಾಸನ ಗದಾಪರ್ವದಲ್ಲಿ ಅಶ್ವತ್ಥಾಮನು ಸರಿರಾತ್ರಿಯಲ್ಲಿ ದ್ರೌಪದಿಯ ಐವರು ಮಕ್ಕಳನ್ನು ದ್ವೇಷದಿಂದ ಮತ್ತನಾಗಿ ಹತ್ಯೆ ಮಾಡುತ್ತಾನೆ. ಇದನ್ನು ತಿಳಿದ ಭೀಮ ಮತ್ತು ಅರ್ಜುನರು ಕಡುಕೋಪದಿಂದ ಕನಲಿ, ತಮ್ಮ ಮಕ್ಕಳ ಸಾವಿಗೆ ಪ್ರತೀಕಾರವಾಗಿ 'ಸುತರ ತಲೆಯ್ಯೆದಕ್ಕೆ ರಿಪುಗುರು ಸುತನ ತಲೆಯೇ ಹೋಣೆ ಕಣಾ' ಎಂದು ಬಗೆದು ಅಶ್ವತ್ಥಾಮನನ್ನು ವಧಿಸಲು ಮುಂದಾಗುತ್ತಾರೆ. ಇದನ್ನು ತಿಳಿದ ದ್ರೌಪದಿಯು ಆಯುಧ ಹಿಡಿದ ಭೀಮ ಮತ್ತು ಅರ್ಜುನರಿಗೆ ಅಡ್ಡ ಬಂದು, ಗುರುನಂದನನ ಕೊಲಬೇಡಿ. ಯುದ್ಧ ಭೂಮಿಯಲ್ಲಿ ಈಗಾಗಲೇ ಮಡಿದಿರುವವರಿಗಾಗಿ ರೋದಿಸುತ್ತಿರುವ ಅವರ ಪತ್ನಿಯರು, ತಾಯಂದಿರಂತೆ, ಈಗಾಗಲೇ ಗಂಡನನ್ನು ಕಳೆದುಕೊಂಡಿರುವ ಅಶ್ವತ್ಥಾಮನ ತಾಯಿಯೂ ದುಃಖಿತಳಾಗುತ್ತಾಳೆ, ಅನಾಥಳಾಗುತ್ತಾಳೆ. ಅಂತಿಮವಾಗಿ ಯುದ್ಧ ಮತ್ತು ಹಿಂಸೆಯಿಂದ ನಲುಗುವವರು ಮಹಿಳೆಯರೇ ಆದ್ದರಿಂದ 'ಅಬಲಾವೃಂದ ಸಮಸುಖದುಃಖಿಗಳು' ಎಂದು ಅವರನ್ನು ತಡೆಯುತ್ತಾಳೆ. ದ್ರೌಪದಿಯ ಈ ಮಾತು ಆ ಕ್ಷಣದ ಮಾತಾಗದೆ, ಮಹಿಳಾಲೋಕ ಅನುಭವಿಸುತ್ತಿರುವ ಎಲ್ಲ ಕಾಲದ ದುಗುಡ ಮತ್ತು ಸಂಕಟಗಳ ಮಾತಾಗಿದೆ.

ಮಹಾಭಾರತದ ಯುದ್ಧದಲ್ಲಿ ತನ್ನ ಎದುರಿನಲ್ಲೇ ಬಂಧು ಬಳಗದ ಸರಣಿ ಸಾವುಗಳು ದ್ರೌಪದಿಯನ್ನು ಕಂಗೆಡಿಸಿತ್ತು. ಈಗಾಗಲೇ ಅಭಿಮನ್ಯು, ಘಟೋತ್ಕಚ, ಹಿರಿಯನಾದ ಕರ್ಣ, ದ್ರೋಣ ಮತ್ತು ದುಶ್ಯಾಸನನ ಸಾವೂ ಆಗಿತ್ತು. ಜೀವವನ್ನೇ ಹಿಂಡುವ ಈ ಸಾವುಗಳು ದ್ರೌಪದಿಯ ಹೃದಯವನ್ನು ಕದಡಿವೆ. ದ್ರೌಪದಿಯ ಈ ಅನುಕಂಪದ ಮಾತುಗಳು ತರತಮ ಭಾವವನ್ನೇ ಉಸಿರಾಡುವ ವ್ಯವಸ್ಥೆಯ ಒಳಗನ್ನು ಒಮ್ಮೆ ನೋಡಿಕೊಳ್ಳುವಂತೆ ಮಾಡುತ್ತದೆ! ಈ ಎಲ್ಲ ಸಾವುಗಳಿಂದ, ಸಾವಿಗೆ ಸಾವೇ ಪರಿಹಾರವಲ್ಲ! 'ಕ್ಷಮೆಯೆ ಜಯ' ಎಂಬ ದಾರ್ಶನಿಕ ತಿಳಿವು ದ್ರೌಪದಿಯಲ್ಲಿ ಮೂಡಿತ್ತು. ಕಣ್ಣ ಮುಂದೆಯೇ ತಮ್ಮ ಮಕ್ಕಳನ್ನು ಕಳೆದುಕೊಂಡ ತಾಯಿಯ ದುಃಖ ಎಷ್ಟು ಆಘಾತಕಾರಿಯಾದದ್ದು ಎಂಬುದರ ಅರಿವು ದ್ರೌಪದಿಗೆ ಈಗಾಗಲೇ ಇದೆ. ಆದ್ದರಿಂದಲೇ ತನ್ನಂತೆಯೇ ಇತರ ತಾಯಂದಿರೂ ತಮ್ಮ ಮಕ್ಕಳನ್ನು ಕಳೆದುಕೊಂಡು ಬಾಳಿನುದ್ದಕ್ಕೂ ನೋಯದಿರಲಿ ಎಂಬ ಜೀವಕಾರುಣ್ಯದ ಮಾತುಗಳು ಅವಳಲ್ಲಿ ವ್ಯಕ್ತವಾಗುತ್ತವೆ. ಜೀವಕಾರುಣ್ಯಕ್ಕೆ ಹೃದಯವನ್ನು ಔನ್ನತ್ಯಕ್ಕೊಯ್ಯುವ ಮಾಂತ್ರಿಕ ಶಕ್ತಿ ಇದೆ.

ಹಿಂಸೆ, ಹಗೆತನ, ಅಧಿಕಾರ ದಾಹದಲ್ಲೇ ಹುಟ್ಟಿಬೆಳೆದ ತನ್ನ ಕಾಲದ ಪ್ರಭುತ್ವಕ್ಕೆ ದ್ರೌಪದಿಯ ಈ ಉತ್ತರ ಎಷ್ಟು ತಾಕಿತೋ ತಿಳಿಯದು! ದ್ರೌಪದಿಯೂ ಹಲವಾರು ಸಲ ಹಗೆತನಕ್ಕೆ ಎಳೆಸಿದರೂ, ಅಂತಿಮವಾಗಿ ಅವಳ ಜೀವನದೃಷ್ಟಿ ಜೀವಕಾರುಣ್ಯವೇ ಆಗಿತ್ತು. ಇಡೀ ಮಹಾಭಾರತದಲ್ಲಿ ಗಂಡಂದಿರನ್ನು, ಮಕ್ಕಳನ್ನೂ ಕಳೆದುಕೊಂಡು ನೊಂದ ಹೆಣ್ಣುಗಳ ಸರಮಾಲೆಯೆ ಇದೆ, ಅದರಲ್ಲಿ ದ್ರೌಪದಿಯೂ ಒಬ್ಬಳು.

ದ್ರೌಪದಿಯ ಹೃದಯದಿಂದ ಮೂಡಿದ ಈ ಪ್ರಾರ್ಥನೆ ಅಂತಿಮವಾಗಿ ಎಲ್ಲರ ಹೃದಯದ ಪ್ರಾರ್ಥನೆಯೂ ಆದಾಗ, ಸಮಾಜ ಹಿಂಸೆ, ಅಸಹಿಷ್ಣುತೆ, ದ್ವೇಷದ ನಂಜಿನಿಂದ ಪಾರಾಗುತ್ತದೆ. ಎಚ್.ಎಸ್. ಶಿವಪ್ರಕಾಶರ 'ಮಹಾಚೈತ್ರ' ನಾಟಕದ ತುದಿಯಲ್ಲಿ ಮಡಿವಾಳ ಮಾಚಯ್ಯ ಮತ್ತು ಹಡಪದ ಅಪ್ಪಣ್ಣ ಹೇಳುವ ಮಾತಿನಿಂದ ನಾಟಕ ಮುಗಿದು, ಅದು ಮತ್ತೆ ಆರಂಭಗೊಳ್ಳುತ್ತದೆ 'ಅಲ್ಲಿ ಮಿಂದು ನಮ್ಮ ಕೈಗಳ ರಕ್ತ, ಮನಸ್ಸಿನ ಬೆಂಕಿ ಎರಡನ್ನೂ ತೊಳೆದುಕೊಂಡು ಇನ್ನು ಮುಂದೆ ಇಹದ ಮಹಾಮನೆಗೆ' ಎಂದು, ಆಗಿರುವ ವಿನಾಶವನ್ನು ಮರೆತು ಹೊಸ ಸೃಷ್ಟಿಯ ಕಡೆ ಹೊರಡುತ್ತಾರೆ. ನಮ್ಮ ವರ್ತಮಾನದ ಲೋಕದ ನಡೆಯೂ ಹೀಗೆಯೇ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಕೊಡಬನ್ನಿ ಕೊಳಬನ್ನಿ ಕೊಡುವೆನೀ ಬನ್ನಿ ಹೀಗೆಂದು ಸಾಗೋಣ ಸೀಮೆಯನು ದಾಟಿ.
  —ಬೇಂದ್ರೆ
- ಬೇಸರಕ್ಕೆ ಕುತೂಹಲವೇ ಔಷಧಿ. ಕುತೂಹಲಕ್ಕೆ ಯಾವ ಔಷಧಿಯೂ ಇಲ್ಲ.
  —ಎಲೆನ್ ಪಾರ್
- ಒಬ್ಬ ಮನುಷ್ಯನಿಗೆ ಅವನ ಬಗ್ಗೆಯೇ ನಗಲು ಸಮಯವಿಲ್ಲ ಎಂದಾದಲ್ಲಿ, ಅದು ಇತರರು ಅವನನ್ನು ನೋಡಿ ನಗಲು ಒಳ್ಳೆಯ ಸಮಯ.
  —ಥಾಮಸ್ ಸಾರ್ಝ್
- ಬಾಳನ್ನು ಹಸನಾಗಿಸಿಕೊಳ್ಳಬೇಕು. ಪ್ರಹಸನವಾಗಿಸಿಕೊಳ್ಳಬಾರದು.
  —ಕೆ.ಎಸ್. ನಿಸಾರ್ ಅಹಮದ್
- ಬೇಟೆಯ ನಂತರ, ಯುದ್ಧದ ವೇಳೆ ಮತ್ತು ಚುನಾವಣೆಗೆ ಮುನ್ನ ಹೇಳುವಷ್ಟು ಸುಳ್ಳುಗಳನ್ನು ಜನ ಇನ್ಯಾವ ಹೊತ್ತಲ್ಲೂ ಹೇಳುವುದಿಲ್ಲ.
  —ಬಿಸ್ಮಾರ್ಕ್
- ಹೃದಯವಂತಿಕೆ ಇಲ್ಲದ ಬುದ್ಧಿವಂತಿಕೆ ಕಾಲಿನ ಕಸಕ್ಕಿಂತಲೂ ಕನಿಷ್ಠ.
  —ಎಡ್ವರ್ಡ್ ಯಂಗ್